ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಮಿತಿ (ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿ)

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 31/10/2019

# ಕೆಲಸ ಮಾಡ್ದೇ ಪಗಾರ: ಸದನ ಸಮಿತಿ ಬೇಸರ

**ಬೆಂಗಳೂರು:** 150 ಎಸ್‌ಸಿ-ಎಸ್‌ಟಿ ಇಂಜಿನಿಯರ್‌ಗಳಿಗೆ ಕರ್ತವ್ಯ ನಿರ್ವಹಿಸಲು ಸ್ಥಳ ನೀಡದೆ ಸತಾಯಿಸುತ್ತಿರುವ ಲೋಕೋಪಯೋಗಿ ಇಲಾಖೆ ಕ್ರಮಕ್ಕೆ ವಿಧಾನಮಂಡಲದ ಅನುಸೂಚಿತ ಜಾತಿ ಪಂಗಡಗಳ ಸಮಿತಿ ಅಸಮಾಧಾನ ವ್ಯಕ್ತಪಡಿಸಿದೆ. ಜತೆಗೆ ನ.6ರಂದು ಸಭೆ ಕರೆದಿದ್ದು, ಮುಖ್ಯಕಾರ್ಯದರ್ಶಿ ಮತ್ತು ಇಲಾಖಾ ಅಪರ ಮುಖ್ಯಕಾರ್ಯದರ್ಶಿಯಿಂದ ಸ್ಪಷ್ಟನೆ ಬಯಸಿದೆ.

ಲೋಕೋಪಯೋಗಿ ಇಲಾಖೆಯಿಂದ ನಗರಾಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆ, ಸಣ್ಣ ನೀರಾವರಿ, ಜಲಸಂಪನ್ಮೂಲ, ವಸತಿ ಇಲಾಖೆ, ಕೆಐಡಿಬಿಗೆ ನಿಯುಕ್ತಿಗೊಂಡ 150 ಇಂಜಿನಿಯರ್‌ಗಳಿಗೆ ಕರ್ತವ್ಯ ನಿಭಾಯಿಸಲು ಸ್ಥಳ ನೀಡದಿರುವ ಬಗ್ಗೆ **ವಿಜಯವಾಣಿ** ಶನಿವಾರ ವಿಸ್ತೃತ ವರದಿ ಮಾಡಿತ್ತು.

ಬುಧವಾರ ನಡೆದ ವಿಧಾನಮಂಡಲದ ಅನುಸೂಚಿತ ಜಾತಿ ಪಂಗಡಗಳ ಸಮಿತಿ ಸಭೆಯಲ್ಲಿ **ವಿಜಯವಾಣಿ** ವರದಿ ಪ್ರಸ್ತಾಪವಾಗಿದೆ. ಸಮಿತಿ ಅಧ್ಯಕ್ಷ ಎಸ್.ಅಂಗಾರ ಹಾಗೂ ಸದಸ್ಯ ಎನ್.ಮಹೇಶ್ ಈ ಬೆಳವಣಿಗೆ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಲ್ಲದೆ, ತಕ್ಷಣವೇ ಸಮಸ್ಯೆ ಪರಿಹಾರ ಆಗಬೇಕೆಂದು ಬಯಸಿದ್ದಾರೆ.

**ವಿಜಯವಾಣಿ ವರದಿ ಪರಿಣಾಮ**

**» ನ.6ರಂದು ಮಹತ್ವದ ಸಭೆ**

ಈ ಕಾರಣಕ್ಕೆ ನ.6ಕ್ಕೆ ಸಭೆ ಕರೆದಿದ್ದು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಹಾಗೂ ಲೋಕೋಪಯೋಗಿ ಇಲಾಖೆ, ಸರ್ಕಾರದ ಮುಖ್ಯಕಾರ್ಯದರ್ಶಿ ಕಡೆಯಿಂದ ಸಭೆಯಲ್ಲಿ ಹಾಜರಿರುವಂತೆಯೂ ಸೂಚನೆ ನೀಡಿದ್ದಾರೆಂದು ತಿಳಿದುಬಂದಿದೆ. ಆರಂಭದಲ್ಲಿ ಎನ್.ಮಹೇಶ್ **ವಿಜಯವಾಣಿ** ವರದಿ ಪ್ರಸ್ತಾಪಿಸಿ, ಡಿಪಿಎಆರ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಬಳಿಕ ಎಚ್.ಕೆ.ಕುಮಾರಸ್ವಾಮಿ ಮುಖ್ಯಕಾರ್ಯದರ್ಶಿ ಸಭೆಗೆ ಕರೆಸಬೇಕೆಂದು ಪಟ್ಟುಹಿಡಿದರು.